ಕರ್ನಾಟಕ ವಿಧಾನ ಸಭೆ

746

ಶ್ರೀ ಮಹದೇವಪ್ಪ ಹೆಚ್.ಸಿ. ಎ.ಸ.ಸ. (ಟಿ. ನರಸೀಪುರ)

ಅ) ಕೇಂದ್ರ ಸರ್ಕಾರದಿಂದ ರಾಜ್ಯದಲ್ಲಿ ನಕ್ಸಲಿಸಂ ಬೆಳೆಯುತ್ತಿರುವ ಬಗ್ಗೆ ಸಲಹೆ ಸೂಚನೆಗಳು / ನೋಟೀಸ್ ಬಂದಿದೆಯೇ:

ಆ) ನಕ್ಸಲಿಸಂ ಸಮಸ್ಯೆಯು ರಾಜ್ಯಾದ್ಯಂತ ಹರಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಇದನ್ನು ತಡೆಗಟ್ಟಲು ಏನು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಉಪ ಮುಖ್ಯಮಂತ್ರಿ, ಗೃಹ ಮತ್ತು ಸಾರಿಗೆ

ಅ) ಈ ಕುರಿತು ಇದುವರೆವಿಗೂ ಕೇಂದ್ರ ಸರ್ಕಾರದಿಂದ ಯಾವುದೇ ಸೂಚನೆಗಳು ಅಥವಾ ನೋಟೀಸ್ ಬಂದಿರುವುದಿಲ್ಲ.

ಆ) ಪಶ್ಚಿಮ ಘಟ್ಟದ 4 ಜಿಲ್ಲೆಯಲ್ಲಿ (ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ) ಮತ್ತು ತುಮಕೂರಿನಲ್ಲಿ ನಕ್ಸಲರು ಚಿಕ್ಕ ಚಿಕ್ಕ ಗುಂಪುಗಳಲ್ಲಿ ಇದ್ದು ಇವರ ನಿಗ್ರಹಕ್ಕಾಗಿ ನಕ್ಸಲ್ ನಿಗ್ರಹ ಪಡೆ ಮತ್ತು ಸ್ಥಳೀಯ ಪೊಲೀಸ್ ಹಾಗೂ ರಾಜ್ಯ ಗುಪ್ತವಾರ್ತೆ ಇಲಾಖೆಗಳು ಕಾರ್ಯನಿರ್ವಹಿಸುತ್ತದೆ. ಎ.ಎನ್.ಎಫ್ ವತಿಯಿಂದ ಪಶ್ಚಿಮ ಘಟ್ಟದ 4 ಜಿಲ್ಲೆಗಳಿಂದ 10 ಎ.ಎನ್.ಎಫ್ ಕ್ಯಾಂಪುಗಳನ್ನು ಮಾಡಿ ಸತತವಾಗಿ ಕೂಂಬಿಂಗ್ ಮತ್ತು ಅಂಬುಷ್ ಕಾರ್ಯಾಚರಣೆ ಮಾಡಲಾಗುತ್ತಿದ್ದು, ದಿನಾಂಕ : 06.01.2012 ರಂದು ಆಗುಂಬೆ ಪೊಲೀಸ್ ಠಾಣೆಯ ಬರ್ಕಣದಲ್ಲಿ, ದಿನಾಂಕ : 10.03.2012 ರಂದು ಬೆಳ್ತಂಗಡಿ ಪೊಲೀಸ್ ಠಾಣೆಯ ವ್ಯಾಪ್ತಿಯ ಕೊಲ್ಲಿ ಅರಣ್ಯದಲ್ಲಿ ಮತ್ತು ದಿನಾಂಕ : 20.04.2012 ರಂದು ವೇಣೂರು ಪೊಲೀಸ್ ಠಾಣಾ ವ್ಯಾಪ್ತಿಯ ಕುತ್ಲೂರು ಅರಣ್ಯ ವ್ಯಾಪ್ತಿಯಲ್ಲಿ ನಕ್ಸಲರ ಮತ್ತು ಎ.ಎನ್.ಎಫ್ ನಡುವೆ ಗುಂಡಿನ ಚಕಮಕಿ ಆಗಿದ್ದು, ನಕ್ಸಲರು ಪರಾರಿಯಾಗಿದ್ದು, ಆ ಸ್ಥಳದಲ್ಲಿ ದೊಡ್ಡ ಪ್ರಮಾಣದ ಗ್ರೀನೇಡ್, ಆಯುಧ, ಮದ್ದುಗುಂಡುಗಳು, ಡೆಟೋನೇಟರ್‌ಗಳು, ಆಹಾರ ಪದಾರ್ಥಗಳು, ಬಟ್ಟೆಗಳು, ನಕ್ಸಲ್ ಪ್ರಚೋದಿತ ಪುಸ್ತಕಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ.

ನಕ್ಸಲರು ಸಣ್ಣ ಸಣ್ಣ ಗುಂಪುಗಳಾಗಿ ಮಲೆನಾಡಿನ ಅರಣ್ಯದಲ್ಲಿ ಓಡಾಡುತ್ತಿದ್ದು, ಅವರ ಕಾರ್ಯಚಟುವಟಿಕೆಗಳನ್ನು ಮುಂದುವರಿಸದಂತೆ ಮತ್ತು ಕ್ಯಾಂಪ್‌ಗಳನ್ನು ಮಾಡದಂತೆ ನಕ್ಸಲ್ ನಿಗ್ರಹ ದಳವು ಸತತವಾಗಿ ಕೋಂಬಿಂಗ್ ಮತ್ತು ಅಂಬುಷ್ ಕಾರ್ಯಾಚರಣೆಯನ್ನು ಮುಂದುವರಿಸಲಾಗುತ್ತಿದೆ.

ಈಗ ಹಾಲಿ ಇರುವ ಎ.ಎನ್.ಎಫ್.ನ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಆಂಧ್ರಪ್ರದೇಶದ ಗ್ರೇಹೌಂಡ್ಸ್‌ನಲ್ಲಿ ಜಂಗಲ್ ವಾರ್‌ಫೇರ್ ತರಬೇತಿಯನ್ನು ನೀಡಲಾಗುತ್ತಿದೆ.

ಸ್ಥಳೀಯ ಪೊಲೀಸ್ ಮತ್ತು ಗುಪ್ತಚರ ಇಲಾಖೆಯವರು ಈ ಸಂಬಂಧ ಕರ್ತವ್ಯ ನಿರತರಾಗಿರುತ್ತಾರೆ.

ಹೆಚ್‌ಡಿ 340 ಎಸ್‌ಎಸ್‌ಟಿ 2012

ಸಹಿ/-
(ಆರ್. ಅಶೋಕ್)
ಉಪ ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

866

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ)

ಅ) ಬಡವರಿಗೆ, ಕಡುಬಡವರಿಗೆ, ಮಧ್ಯಮ ವರ್ಗದ ವಸತಿ ಹೀನರಿಗೆ ವಸತಿ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಆ) ಕಳೆದ ಮೂರು ವರ್ಷಗಳಿಂದ ಯಾವ ಯಾವ ಯೋಜನೆಗಳ ಮೂಲಕ ಎಷ್ಟು ಜನಗಳಿಗೆ ವಸತಿ ಸೌಕರ್ಯಗಳನ್ನು ಸರ್ಕಾರವು ಕಲ್ಪಿಸಿದೆ ಹಾಗೂ ಇದಕ್ಕೆ ತಗುಲಿದ ವೆಚ್ಚವೆಷ್ಟು (ವಿಧಾನಸಭಾವಾರು ಹಾಗೂ ಯೋಜನಾವಾರು ವಿವರ ನೀಡುವುದು)

ಇ) ಕಳೆದ ಮೂರು ವರ್ಷಗಳಲ್ಲಿ ವಸತಿ ಸೌಕರ್ಯ ಕಲ್ಪಿಸಲು ನಿಗಧಿಪಡಿಸಲಾದ ,ಮೊತ್ತವೆಷ್ಟು ಹಾಗೂ ಸಾಧಿಸಲಾದ ಆರ್ಥಿಕ ಹಾಗೂ ಭೌತಿಕ ಸಾಧನೆಗಳೆಷ್ಟು (ಯೋಜನಾವಾರು ಹಾಗೂ ವರ್ಷಾವಾರು ವಿಧಾನಸಭಾವಾರು ವಿವರ ಒದಗಿಸುವುದು)?

ಈ) ನಿಗಧಿತ ಗುರಿ ಸಾಧಿಸಲು ಸಾಧ್ಯವಾಗಿದೆಯೇ? ಇಲ್ಲದಿದ್ದಲ್ಲಿ ಕಾರಣಗಳೇನು?

ಮಾನ್ಯ ವಸತಿ ಸಚಿವರು

ಅ) 1. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ :

ಬಡವರಿಗೆ, ಕಡುಬಡವರಿಗೆ, ಮಧ್ಯಮ ವರ್ಗದ ವಸತಿ ಹೀನರಿಗೆ ವಸತಿ ಸೌಕರ್ಯಗಳನ್ನು ಈ ಕೆಳಕಂಡ ವಸತಿ ಯೋಜನೆಗಳ ಮೂಲಕ ಕಲ್ಪಿಸಲಾಗುತ್ತಿದೆ.